ಓ .ಎಸ್ ನಂಃ 46/2016
ಡಿಡಬ್ಲ್ಯೂಃ 2
ದಿನಾಂಕಃ 15.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃವಾದಿ ಪರ ಶ್ರೀ ಎನ್ ಎಂ ವಕೀಲರಿಂದಃ

ಪಟ್ಟಾಭಿರಾಮಯ್ಯ ನನಗೆ ಸುಮಾರು 30-35 ವರ್ಷಗಳಿಂದ ಪರಿಚಯ. ನಾನು ವಾಸವಾಗಿರುವ ಸ್ಥಳಕ್ಕೂ ದಾವಾ ಸ್ವತ್ತಿಗೂ ಅಂತರ ಎಷ್ಟು ಎಂದರೆ 10 ಕಿ. ಮೀ ಎನ್ನುತ್ತಾರೆ. ನ್ಯಾಯಾಲಯದಲ್ಲಿ ದಾವೆ ಇದೆ ಎಂದು ಯಾರ ಮುಖಾಂತರ ತಿಳಿದುಕೊಂಡಿರುತ್ತೇನೆ ಎಂದರೆ ಪಟ್ಟಾಭಿರಾಮಯ್ಯ ಮತ್ತು ವಕೀಲರ ಮೂಲಕ ಎನ್ನುತ್ತಾರೆ. ಪಟ್ಟಾಭಿರಾಮಯ್ಯ ನನಗೆ ಸ್ನೇಹಿತರು ಎನ್ನುವುದನ್ನು ಬಿಟ್ಟು ಸಂಬಂಧಿಕರೇ ಅಂದರೆ ಇಲ್ಲ ಎನ್ನುತ್ತಾರೆ. ಪಟ್ಟಾಭಿರಾಮಯ್ಯನವರ ಮಗಳನ್ನು ಈ ದಾವೆಯಲ್ಲಿ ತೋರಿಸಿರುವ 2 ನೇ ಪ್ರತಿವಾದಿ ಯವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . 2 ನೆ ಪ್ರತಿವಾದಿಯ ಮದುವೆ ಆಗುವುದಕ್ಕಿಂತ ಮುಂಚೆ ವಾದಿಗಳ ಕುಟುಂಬದ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದರೆ ತಿಳಿದಿತ್ತು ಎನ್ನುತ್ತಾರೆ. ಮದುವೆಯಾಗುವುದಕ್ಕೂ ಮುಂಚೆ 20 ವರ್ಷಗಳಿಂದ ಪರಿಚಯ. ನನ್ನ ಪ್ರಮಾಣ ಪತ್ರದಲ್ಲಿ ವಾದಿಗಳ ಕುಟುಂಬ ನನಗೆ 30 ವರ್ಷಗಳಿಂದ ಪರಿಚಯ ಎಂದು ಹೇಳಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ರಾತ್ರಿ ಶಾಲೆ ನಡೆಸುತ್ತಿದ್ದರಿಂದ ಪರಿಚಯ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾರಾಯಣಸ್ವಾಮಿ , ಬೈರೇಗೌಡ ಮತ್ತು ವಕೀಲರು ಎನ್ನುತ್ತಾರೆ. ವಾದಿಗಳ ಕುಟುಂಬ ನನಗೆ ಯಾರ ಮುಖಾಂತರ ಪರಿಚಯ ಅಂದರೆ ವಾದಿಗಳ ತಂದೆ ನಂಜುಂಡಪ್ಪರವರ ಮೂಲಕ ಎನ್ನುತ್ತಾರೆ.

2003 ರಲ್ಲಿ ನಾನು ಬೂದಿಕೋಟೆಯಲ್ಲಿ ಕೆಲಸ ಮಾಡುತ್ತಿದ್ದೆ . ನಂಜುಂಡಪ್ಪನವರ ಕುಟುಂಬದಲ್ಲಿ ಎಷ್ಟು ಸದಸ್ಯರು ಇರುತ್ತಾರೆ ಎಂದು ನನಗೆ ಗೊತ್ತು. ಅವರುಗಳೆಂದರೆ ಇಬ್ಬರು ಗಂಡು ಮಕ್ಕಳು , 4 ಹೆಣ್ಣು ಮಕ್ಕಳು , ಗಂಡು ಮಗನ ಪೈಕಿ ಒಬ್ಬರು ಶಿಕ್ಷಕರು ಎನ್ನುತ್ತಾರೆ. ಹೆಣ್ಣು ಮಕ್ಕಳು ಏನು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಅವರು ಮದುವೆಯಾಗಿದ್ದು ನಂತರ ಏನು ಮಾಡುತ್ತಿದ್ದಾರೆ ಗೊತ್ತಿಲ್ಲ ಎನ್ನುತ್ತಾರೆ. ಅವರ ಹೆಣ್ಣು ಗಂಡು ಮಕ್ಕಳ ಪೈಕಿ ಕೊನೆಯ ಮದುವೆ ಯಾರದ್ದು ಆಗಿದ್ದು ಎಂದರೆ ನೆನಪಿಲ್ಲ ಎನ್ನುತ್ತಾರೆ. ಈ ಕೇಸನ್ನು ಎಷ್ಟು ದಾವಾ ಸ್ವತ್ತುಗಳ ಸಂಬಂಧ ಹೂಡಲಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನೆಯೇ ಅಂದರೆ ಗೊತ್ತು ಈಗ ನೆನಪಿಲ್ಲ ಎನ್ನುತ್ತಾರೆ. 2003 ರಲ್ಲಿ ಆದಂತಹ ವಿಭಾಗ ಪತ್ರವನ್ನು ನಾನು ಹೇಳಿ ಮಾಡಿಸಿದ್ದೆ ಎಂದರೆ ನಾನು ಸೇರಿ 4 ಜನ

ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎನ್ನುತ್ತಾರೆ. ಅವರುಗಳೆಂದರೆ ಶಾಮಣ್ಣ, ಪಟ್ಟಾಭಿರಾಮಯ್ಯ, ನಂಜುಂಡಪ್ಪ ಮತ್ತು ನಾನು ಎನ್ನುತ್ತಾರೆ. ವಿಭಾಗ ಪತ್ರ ಮಾಡುವಾಗ ಯಾರ್ಯಾರು ಸೇರಿ ಮಾಡಿರುತ್ತಾರೆ ಎಂದರೆ ಊರಿನ ಹಿರಿಯರು , ನಾರಾಯಣಸ್ವಾಮಿ, ಬೈರೇಗೌಡ , ಹೆಣ್ಣು ಮಕ್ಕಳು , ಅವರ ತಂದೆ ಮತ್ತು ಸಂಬಂಧಿಕರು ಇದ್ದರು ಎನ್ನುತ್ತಾರೆ. ಆ ದಿನ ಎಲ್ಲಾ ಹೆಣ್ಣು ಮಕ್ಕಳು ಇದ್ದರೇ ಅಂದರೆ ಕೆಲವರು ಇದ್ದರು ಕೆಲವರು ಇರಲಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆದರೂ ಸಹ ನಾನು ಹೆಣ್ಣು ಮಕ್ಕಳ ಬಗ್ಗೆ ಕೇಳಿದ್ದು ಬೈರೇಗೌಡ ಅದಕ್ಕೆ ಹೆಣ್ಣು ಮಕ್ಕಳು ವಿಚಾರ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ಈ ವಿಭಾಗ ಪತ್ರದ ಮೂಲಕ ಯಾರ್ಯಾರಿಗೆ ಯಾವ ಯಾವ ಆಸ್ತಿ ಬಂದಿದೆ ಎಂದು ನನಗೆ ಚೆನ್ನಾಗಿ ತಿಳಿದಿದೆ ಅಂದರೆ ಈಗ ನೆನಪಿಲ್ಲ ಎನ್ನುತ್ತಾರೆ. ವಿಭಾಗ ಪತ್ರಕ್ಕೆ ಎಲ್ಲಿ ಸಹಿ ಮಾಡಲಾಗಿದೆ ಎಂದರೆ ಮನೆಯಲ್ಲಿ ಮಾಡಲಾಗಿದೆ ಎನ್ನುತ್ತಾರೆ. ನಾನು ವಿಭಾಗ ಪತ್ರಕ್ಕೆ ಸಹಿ ಮಾಡಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ವಿಭಾಗ ಪತ್ರಕ್ಕೆ ಸಹಿ ಮಾಡಿದ್ದರೇ ನೊಂದಣಿ ಸಮಯದಲ್ಲೂ ಸಹ ನನ್ನ ಹೆಸರು ಸಾಕ್ಷಿ ಜಾಗದಲ್ಲಿ ತೋರಿಸಲಾಗುತ್ತಿತ್ತು ಎಂದರೆ ಎಲ್ಲರನ್ನು ಕರೆದಿದ್ದು ಪತ್ರಕ್ಕೆ ಇಬ್ಬರ ಸಹಿ ಮಾತ್ರ ಬೇಕು ಎಂದು ಇಬ್ಬರ ಸಾಕ್ಷಿದಾರರನ್ನು ಮಾತ್ರ ಕರೆಸಿ ಸಹಿ ಹಾಕಿಸಿರುತ್ತಾರೆ ಎನ್ನುತ್ತಾರೆ.

ವಿಭಾಗ ಪತ್ರಕ್ಕೆ ಒಬ್ಬ ಮಗಳ ಸಹಿ ಮಾತ್ರ ಮಾಡಿಸಿದ್ದು ಬೇರೆಯವರ ಸಹಿ ಮಾಡಿಸಿಲ್ಲ ಎಂದರೆ ಬೈರೇಗೌಡ ಅದರ ಜವಬ್ದಾರಿ ಹೊತ್ತಿದ್ದರು ಎನ್ನುತ್ತಾರೆ. ನಾರಾಯಣಸ್ವಾಮಿಯವರು ಯಾವ ಯಾವ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಸಾಲ ಮಾಡಿರುತ್ತಾರೆ ನನಗೆ ಗೊತ್ತಾ ಎಂದರೆ ಗೊತ್ತು , ಬೇತಮಂಲದ ಕೆನರಾ ಬ್ಯಾಂಕ್ ಮತ್ತು ಪಿಎಲ್ಡಿ ಬ್ಯಾಂಕ್ ಹಾಗೂ ಸೊಸೈಟಿಗಳಲ್ಲಿ ಎನ್ನುತ್ತಾರೆ. ನಾನು 2 ನೇ ಪ್ರತಿವಾದಿ ಸಾಲ ಪಡೆದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುತ್ತೇನೆಯೇ ಅಥವಾ ಸಾಲದ ಜಾಮೀನುದಾರನಾಗಿ ಸಹಿ ಮಾಡಿರುತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ವಿಭಾಗ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ ನಂಜುಂಡಪ್ಪ ನನಗೆ ಚೆನ್ನಾಗಿ ಪರಿಚಿತರೇ ಅಂದರೆ ಪರಿಚಿತರು ಅವರು ಊರಿನಲ್ಲಿ ದೊಡ್ಡವರು ಎನ್ನುತ್ತಾರೆ. ನಂಜುಂಡಪ್ಪನವರ ಆಸ್ತಿಯನ್ನು ಸೇರಿಸಿ ವಿಭಾಗ ಪತ್ರ ಮಾಡಲಾಗಿದೆ ಆ ವಿಚಾರ ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಪಟ್ಟಾಭಿರಾಮಯ್ಯ ನನ್ನ ಸ್ನೇಹಿತನಾದ್ದರಿಂದ ನಾನು ಅವರಿಗೆ ಅನುಕೂಲವಾಗಲೀ ಎಂದು ವಿಭಾಗ ಪತ್ರವನ್ನು

ಹೆಣ್ಣು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ತೋರಿಸಿರುವ ಉಳಿದ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಾ ಎಂದರೆ ನೆನಪಿಲ್ಲ ಎನ್ನುತ್ತಾರೆ.

ಪಾಟೀ ಸವಾಲುಃ **1** ಮತ್ತು **4** ನೇ ಪ್ರತಿವಾದಿ ಪರ ಶ್ರೀ ಆರ್ ಪಿ ವಕೀಲರಿಂದಃ

ವಾದಿಗಳ ತಂದೆ ನಂಜುಂಡಪ್ಪ ಅವಿದ್ಯಾವಂತರು ಎಂದರೆ ಸರಿ . ನಾನು ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದು ಹೇಳಿದ್ದು ಸದರಿ ವಿಭಾಗ ಪತ್ರವನ್ನು ಎಲ್ಲಿ ಬೆರಳಚ್ಚು ಮಾಡಲಾಗಿದೆ ಎಂದರೆ ಬೇತಮಂಗಲ ದಲ್ಲಿ ಮಾಡಿರಬಹುದು ಎನ್ನುತ್ತಾರೆ. ವಿಭಾಗ ಪತ್ರದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಸ್ವತ್ತುಗಳು ಹೋಗಿದೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಬೆರಳಚ್ಚು ಮಾಡಿದವರಿಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ನಾರಾಯಣಸ್ವಾಮಿ, ಬೈರೇಗೌಡ ಮತ್ತು ಅವರ ತಂದೆ ಎನ್ನುತ್ತಾರೆ. ನಂಜುಂಡಪ್ಪನವರ ಕುಟುಂಬದ ಎಲ್ಲಾ ಆಸ್ತಿಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇದೆಯೇ ಅಂದರೆ ಇದೆ ಆದರೆ ಈಗ ನೆನಪಿಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾ ಣ ಪತ್ರದಲ್ಲಿ ವಿಭಾಗ ಪತ್ರದಲ್ಲಿ ತೋರಿಸಿರುವ ಆಸ್ತಿಗಳನ್ನು ಹೊರತುಪಡಿಸಿ ನಂಜುಂಡಪ್ಪ ನವರ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿ ಇಲ್ಲ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ . ಬೇರೆ ಆಸ್ತಿ ಇರಬಹುದು ನನಗೆ ಹೇಳಿಲ್ಲ ಎನ್ನುತ್ತಾರೆ.

ನಂಜುಂಡಪ್ಪ ನನಗೆ 37 ವರ್ಷಗಳಿಂದ ಪರಿಚಯ ರಾತ್ರಿ ಶಾಲೆಗೆ ಬರುತ್ತಿದ್ದರಿಂದ ಪರಿಚಯವಾಗಿರುತ್ತದೆ ಎನ್ನುತ್ತಾರೆ. ರಾತ್ರಿ ಶಾಲೆ ಎಲ್ಲಿ ಮಾಡುತ್ತಿದ್ದೀರೀ ಅಂದರೆ ನಾನು ಮಾಡುತ್ತಿರಲಿಲ್ಲ ನಾನು ನಿರ್ವಹಣೆ ಮಾಡುತ್ತಿದ್ದೆ. ಕಳ್ಳಿ ಕುಪ್ಪದಲ್ಲಿ ರಾತ್ರಿ ಶಾಲೆ ನಡೆಯುತ್ತಿತ್ತು ಎನ್ನುತ್ತಾರೆ. ನಂಜುಂಡಪ್ಪನವರ ಮನೆ ಊರಿನಿಂದ ಅರ್ಧ ಕಿಮೀ ಹೊರಗೆ ಇದೆ ಎಂದರೆ ಹಳೆ ಮನೆ ಇದೆ ಹೊಸಮನೆ ಊರಿನಲ್ಲಿಯೇ ಇದೆ ಎನ್ನುತ್ತಾರೆ. ವಿಭಾಗ ಪತ್ರ ಆದಾಗ ಹಳೆ ಮನೆಯಲ್ಲಿ ವಾಸ ಎಂದರೆ ಹಳೆ ಮತ್ತು ಹೊಸ ಮನೆಯಲ್ಲಿಯೂ ಇದ್ದರು ಎನ್ನುತ್ತಾರೆ. ನಾನು ವಿಭಾಗಪತ್ರವನ್ನು ನೋಡಿರುತ್ತೇನೆ . ಸದರಿ ವಿಭಾಗ ಪತ್ರದಲ್ಲಿ ಹಳೆ ಮನೆಯನ್ನು ಸೇರಿಸಿಲ್ಲ ಎಂದರೆ ನೆನಪಿಲ್ಲ ಎನ್ನುತ್ತಾರೆ. ನಂಜುಂಡಪ್ಪ ಮತ್ತು ನನಗೆ ಯಾವೂದೇ ರೀತಿ ವ್ಯವಹಾರ ಇಲ್ಲ ಎಂದರೆ ಸರಿ ಅವರು ಸ್ನೇಹಿತರು, ಪರಿಚಯಸ್ಥರು ಎನ್ನುತ್ತಾರೆ. ನಂಜುಂಡಪ್ಪನವರಿಗೆ ಎಷ್ಟು ಜನ ಮಕ್ಕಳು ಎನ್ನುವ

ಬಗ್ಗೆ ಮಾಹಿತಿ ಇದೆ . ಈ ದಾವೆಯ 4 ನೇ ಪ್ರತಿವಾದಿ ರೂಪ ಗೊತ್ತು . ವಾದಿಗಳ ಪೈಕಿ ಶಾಮಲಮ್ಮ ಶ್ರೀನಿವಾಸಪುರ ವಾಸಿ ಎಂದರೆ ಮದುವೆಯಾದ ಮೇಲೆ ಅಲ್ಲಿಗೆ ಹೋಗಿರುತ್ತಾರೆ ಎನ್ನುತ್ತಾರೆ. 4 ನೇ ಪ್ರತಿವಾದಿ ರೂಪ ಶ್ರೀನಿವಾಸಪುರದಲ್ಲಿ ಶಾಮಲಮ್ಮನವರ ಮನೆಯಲ್ಲಿ ವಾಸವಾಗಿ ವಿದ್ಯಾಭ್ಯಾಸ ಪೂರೈಸಿರುತ್ತಾರೆ ಎಂದರೆ ಇರಬಹುದು ಎನ್ನುತ್ತಾರೆ. ಅವರು ಶ್ರೀನಿವಾಸಪುರದಲ್ಲಿ ನಾರಾಯಸ್ವಾಮಿ, ನಂಜುಂಡಪ್ಪನವರ ಮೇಲುಸ್ತುವಾರಿಯಲ್ಲಿ ವಿದ್ಯಾಭ್ಯಾಸ ಪೂರೈಸಿರುತ್ತಾರೆ ಎಂದರೆ ಇರಬಹುದು ಎನ್ನುತ್ತಾರೆ. ಆ ರೀತಿ ಅವರ ಉಸ್ತುವಾರಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರಿಂದ ನಾರಾಯಣಸ್ವಾಮಿ ಮತ್ತು ನಂಜುಂಡಪ್ಪನವರ ಮಾತು ಕೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಪಟ್ಟಾಭಿರಾಮಯ್ಯ ಮತ್ತು ನಾನು ಸ್ನೇಹಿತರು ಅವರ ಮಗಳನ್ನು 2 ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಪತ್ರ ಯಾರು ಬರೆದಿರುತ್ತಾರೆ ಎಂದರೆ ನೆನಪಿಲ್ಲ ಎನ್ನುತ್ತಾರೆ. ವಿಭಾಗ ಪತ್ರವನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಗೆ ಬರೆದಿರುತ್ತಾರೆ ಎಂದರೆ ಸರಿಯಾದ ಸಮಯ ಗೊತ್ತಿಲ್ಲ ಎನ್ನುತ್ತಾರೆ. ವಿಭಾಗ ಪತ್ರವನ್ನು ಕೈಯಲ್ಲಿ ಬರೆಯಲಾಗಿದೆಯೇ ಅಥವಾ ಬೆರಳಚ್ಚು ಮಾಡಲಾಗಿದೆಯಾ ಅಂದರೆ ಮೊದಲು ಕೈಯಲ್ಲಿ ಬರೆದು ನಂತರ ಬೆರಳಚ್ಚು ಮಾಡಿರಬಹುದು ಎನ್ನುತ್ತಾರೆ. ಬೆರಳಚ್ಚು ಮತ್ತು ಕೈಯಲ್ಲಿ ವಿಭಾಗಪತ್ರ ಬರೆಯಲಾಗಿದೆ ಎಂದು ನಿಖರವಾಗಿ ಗೊತ್ತಿದ್ದೆಯಾ ಅಂದರೆ ಗೊತ್ತಿಲ್ಲ ಎಂದು ನಂತರ ನೆನಪಿಲ್ಲ ಎನ್ನುತ್ತಾರೆ. ಆ ದಿನ ಯಾವುದೇ ಪತ್ರವನ್ನು ಬರೆಯಲಾಗಿಲ್ಲ , ಬೆರಳಚ್ಚು ಮಾಡಲಾಗಿಲ್ಲ ಪಟ್ಟಾಭಿರಾಮಯ್ಯನವರ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದರೆ ನಾರಾಯಣಸ್ವಾಮಿ, ನಂಜುಂಡಪ್ಪ , ಬೈರೇಗೌಡ , ರೂಪ ಮತ್ತು ನಾವು ಸಾಕ್ಷಿದಾರಾಗಿ ಸಹಿ ಮಾಡಿರುತ್ತೇವೆ ಎನ್ನುತ್ತಾರೆ. ಸಾಕ್ಷಿದಾರರಾಗಿ ಮೊದಲು ಯಾರು ಸಹಿ ಮಾಡಿರುತ್ತಾರೆ ಎಂದರೆ ನಂಜುಂಡಪ್ಪ , ಶಾಮಣ್ಣ ,ನಾನು ಮತ್ತು ಪಟ್ಟಾಭಿರಾಮಯ್ಯ ಎನ್ನುತ್ತಾರೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರ ನನಗೆ ಗೊತ್ತಿಲ್ಲದೇ ಇದ್ದರೂ ಸಹ 2 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಪಾಟೀ ಸವಾಲು   3 ನೇ ಪ್ರತಿವಾದಿ ಪರ ವಕೀಲರು   1 ಮತ್ತು  4 ನೇ ಪ್ರತಿವಾದಿ ಪರ ವಕೀಲರ  ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.</u>

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ  ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ  ಬೆರಳಚ್ಚು ಮಾಡಲಾಯಿತು)

ಓ   ಹೇ   ಕೇ   ಸರಿ  ಇದೆ

(ರಹೀಮ್ ಅಲಿ  ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್